# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ 20, ಗಂಗಾನಗರ, ಬೆಂಗಳೂರು.

ಸಂಖ್ಯೆ:ಸ.ಅ/ವಾ-20/ಪಿ.ಆರ್./13/2020- 21 ದಿನಾಂಕ: 03.04.2021

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್./35/2021 ದಿನಾಂಕ 05/12/2020 ರವರ ಆದೇಶದಂತೆ ದಿನಾಂಕ: **03/04/2021** ರಂದು ಬೆಳಿಗ್ಗೆ **10.00** ಗಂಟೆಗೆ ವಾರ್ಡ್ ನಂ. **20**, ಗಂಗಾನಗರ, ಸಮಿತಿ ಸಭೆಯನ್ನು 108 ಬಸ್ ನಿಲ್ದಾಣದ ಹತ್ತಿರ ಆರೋಗ್ಯ ಕಛೇರಿಯಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು.

### ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ. | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ ಬಿ.ಎಸ್. ಪ್ರಲ್ಹಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಾಮ್ ರಾವ್ | ಸಹಾಯಕ ಅಭಿಯಂತರರು ವಾರ್ಡ್ ನಂ. 20 |
| 3 | ಶ್ರೀಮತಿ ಶಾಹಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ಶ್ರೀನಿವಾಸ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀಮತಿ ಸುವರ್ಣದೇವಿ | ವರ್ಕ್ ಇನ್ಸ್ ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 6 | ಶ್ರೀ ಶ್ರೀನಿವಾಸ್ | ಸಾರ್ವಜನಿಕರು |
| 7 | ಶ್ರೀ ಉಮೇಶ್ | ಸಾರ್ವಜನಿಕರು |
| 8 | ಶ್ರೀ ಪ್ರಸಾದ್ | ಸಾರ್ವಜನಿಕರು |
| 9 | ಶ್ರೀ ಶ್ರೀನಿವಾಸ್ | ಸಾರ್ವಜನಿಕರು |
| 10 | ಶ್ರೀ ಶಿವಕುಮಾರ್ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಬಿ.ಎಸ್. ಪ್ರಲ್ಹಾದ್ ಮತ್ತು ಕಾರ್ಯದರ್ಶಿ, ಸಹಾಯಕ ಅಭಿಯಂತರರಾದ ಶ್ರೀ. ರಾಮ್ ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ. 20 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್- 19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ಜನಿಕರಿಗೆ ತಿಳಿಯಪಡಿಸಿದರು.

- ವಾರ್ಡ್ ಸಮಿತಿಯ ಸಭೆಯನ್ನು ಆಫೀಸ್ ರೂಮ್ ಮೇಲಿನ ಮಹಡಿಯಲ್ಲಿ ಮಾಡುವ ವಿಷಯವನ್ನು ಚರ್ಚಿಸಲಾಯಿತು.
- ಸಿ.ಬಿ.ಐ. ರಸ್ತೆ ಅಂಡರ್ ಪಾಸ್ ನಲ್ಲಿ ಎದ್ದಿರುವ ಕಂಬಿಗಳ ಕುರಿತು ವಿಷಯವನ್ನು ಚರ್ಚೆ ಮಾಡಿದರು.
- ರಸ್ತೆ ಬದಿಯ ತಳ್ಳುವ ಗಾಡಿ ತೆರವುಗೊಳಿಸಿರುವುದು ಒಳ್ಳೆಯದು. ಆದರೆ ಅಂಗಡಿಯವರೇ ಫುಟ್ ಪಾತ್ ಮೇಲೆ ಬಂದು ವ್ಯವಹಾರ ಮಾಡುತ್ತಿರುವ ವಿಷಯದ ಕುರಿತು ಚರ್ಚೆ ಮಾಡಲಾಯಿತು.
- ಸಿಲ್ವೆಂಟ್ ಟ್ರ್ಯಾಕ್ಟರ್ ಗೆ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಗಾರರನ್ನು ಕಳುಹಿಸಿಕೊಡಬೇಕೆನ್ನುವುದರ ಕುರಿತು ಚರ್ಚಿಸಲಾಯಿತು.
- ರಸ್ತೆ ರಸ್ತೆಗಳಿಗೆ 3 ದಿನಕ್ಕೊಮ್ಮೆ ಸ್ಯಾನಿಟೈಸರ್ ಮಾಡಿಸಬೇಕೆನ್ನುವುದರ ಕುರಿತು ಚರ್ಚಿಸಲಾಯಿತು.
- ಎಚ್.ಎಂ.ಟಿ. ಲೇಔಟ್ ನ 7ನೇ ಅಡ್ಡರಸ್ತೆಯ ರಾಜ್ ಕಾಲುವೆಯ ಮೇಲೆ ಇರುವ ಶೆಡ್ಡನ್ನು ತೆರವುಗೊಳಿಸುವುದರ ಕುರಿತು ಚರ್ಚೆ ಮಾಡಿದರು.
- ಹಳೇ ಚಿಕ್ಕಪೇಟೆ ದೊನ್ನೆ ಬಿರಿಯಾನಿಯ ಹೋಟೇಲನ್ನು ತೆರವುಗೊಳಿಸಬೇಕೆನ್ನುವ ವಿಷಯದ ಕುರಿತು ಚರ್ಚೆ ಮಾಡಿದರು.

**ಕಾರ್ಯದರ್ಶಿಗಳು**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 20**

**ಅಧ್ಯಕ್ಷರು**
**ಹಾಗೂ ನೋಡಲ್ ಅಧಿಕಾರಿಗಳು**
**ವಾರ್ಡ್ ನಂ. 20**

3/4/2021

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ ಅಪರ ಆಯುಕ್ತರು (ಪೂರ್ವ) ಬಿಬಿಎಂಪಿರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ ಎಸ್ ಡಬ್ಲ್ಯೂ ಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ.ರವರ ಅವಗಾಹನೆಗೆ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳು ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್ ಬಿ ರವರ ಅವಗಾಹನೆಗೆ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರು ಅವಗಾಹನೆಗೆ ಕಳುಹಿಸಿದೆ.
9. ಸಹಾಯಕ ಅಭಿಯಂತರರು (ವಿದ್ಯುತ್/ ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10. ಕಛೇರಿ ಕಡತಕ್ಕೆ.